—: The Times of India : —
Wednesday, April 15th, 2015
Page No - 02

## VTU gets SC/ST unit

**Belagavi:** An SC/ST unit was inaugurated at Visvesvaraya Technological University (VTU) on the occasion of Dr BR Ambedkar's 124th birth anniversary here on Tuesday. Addressing the gathering, Nijagunananda Swami of Nishkal Mantap, Bailur, said, "Religion is to celebrate life, not destroy it. He called upon students to rise above materialistic need and serve humanity." Chief guest Chambi Puranik said the principles of Dr Ambedkar are a source of inspiration to the younger generation. Vice-chancellor H Maheshappa said that Ambedkar stood for the depressed class. TNN

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

—: The New Indian Express : —
Wednesday, April 15th, 2015
Page No - 03

# 'Ambedkar's Principles a Source of Inspiration'



Dr Chambi Puranik, VTU Vice-Chancellor H Maheshappa and other dignitaries releasing the VTU SC/ST Cell brochure in Belagavi

**Express News Service**

**Belagavi:** Secularism and socialism are fundamental elements in the preamble of the Constitution, without which no government can run, said Chambi Puranik, academic advisor of GEMS B-School.

He was speaking at the 124th birth anniversary celebration of Bharat Ratna B R Ambedkar and inaugural function of the SC/ST Cell of Visvesvaraya Technological University (VTU) here on Tuesday.

"The principles of Ambedkar are relevant to our society as long as the Indian Constitution and democracy survive. They are a source of inspiration for our younger generation to fight social discrimination," he added.

Nijagunananda Swamiji of Niskal Mantap, Kittur, said religion is to celebrate life, not to destroy and it should also bring equality in society. In the Indian context, the greatest responsibility of the religious leaders is to create awareness about eradication of untouchability. He called upon students to rise above the materialistic world and serve humanity at every step of their life.

Vice Chancellor H Maheshappa presided over the function. VTU SC/ST Cell brochure was released on the occasion. Registrar K E Prakash, Registrar (Evaluation) H G Shekharappa, dean Anand Sivapur and others were present.

More than 500 PG students took part in the event.

—: Deccan Herald :—
Wednesday, April, 15th, 2015
Page No - 02

ಗ್ರಂಥಾಲಯ ಬೆಳಗಾವಿ

# VTU SC/ST cell inaugurated

BELAGAVI: Visvesvaraya Technological University (VTU) organised the birth anniversary of Bharat Ratna Dr B R Ambedkar and inaugural function of the VTU Scheduled Caste & Scheduled Tribes (SC/ST) Cell at its headquarters Jnana Sangama here on Tuesday.

Nijagunanda Swamiji of Niskal Mantap, Kittur, in his address said,"Religion is to celebrate life not to destroy it. It should create equality in the society. In the present Indian scenario, the greatest responsibility of the religious leaders is to create awareness about eradication of untouchability."

He advised students to rise above the materialistic world and serve humanity at every step of their life.

Dr Chambi Puranik, Academic Advisor, GEMS B-School and Former Member, Distance Education Council, New Delhi said that secularism and socialism are fundamental elements of the preamble of the Constitution, without which no government can run.

Principles of Dr Ambedkar are relevant to our society as long as Indian Constitution and democracy survive and also they are the source of inspiration to our younger generation to fight against social discrimination.

Vice-chancellor H Maheshappa, in his presidential remarks said, Dr Ambedkar was a bright star of India and considered as apostle of rights of the depressed classes in our country and never rejected the role of religion in the society.

He believed that true religion was foundation of the society, the basis on which civil government rests.

VTU SC/ST Cell brochure was released on the occasion.

Registrar K E Prakash, Registrar (Evaluation) H G Shekharappa, VTU Dean Anand Sivapur, Dr P P Rathod, faculty members, staff and over 500 VTU PG students participated in the programme.

DH News Service



VTU SC/ST Cell brochure being released during Ambedkar Jayanthi celebration at VTU headquarters Jnana Sangama in Belagavi on Tuesday. Also seen are Nijagunanda Swamiji of Niskal Mantap, Chambi Puranik, H Maheshappa, K E Prakash, H G Shekharappa and P P Rathod. DH PHOTO – 2

— ! ಉದಯವಾಣಿ ! —
ಬುಧವಾರ, ಏಪ್ರಿಲ್ 15, 2015
ಪುಟ ಸಂಖ್ಯೆ - 05

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ
*

# ಸಮಾನತೆ ಸಾರುವುದೇ ಮಾನವ ಧರ್ಮ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಆಶ್ರಯದಲ್ಲಿ ಮಂಗಳವಾರ ಸಂವಿಧಾನ ಶಿಲ್ಪಿ ಡಾ| ಬಿ.ಆರ್. ಅಂಬೇಡ್ಕರರ 124ನೇ ಜನ್ಮ ದಿನಾಚರಣೆ ಹಾಗೂ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕದ ಉದ್ಘಾಟನಾ ಸಮಾರಂಭ ನಡೆಯಿತು.

ನಿಷ್ಕಲ ಮಂಟಪ ಐಲೂರಿನ ನಿಜಗುಣಾನಂದ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಧರ್ಮ ಎನ್ನುವುದು ಮಾನವನ ಜೀವನದಲ್ಲಿ ಸಂಭ್ರಮಾಚರಣೆ ಆಗಬೇಕೇ ಹೊರತು ಸಮಾಜದ ಸ್ವಾಸ್ಥ್ಯ ಹಾಳು ಮಾಡಬಾರದು. ಸಮಾನತೆ ಸಾರುವುದೇ ನಿಜವಾದ ಮಾನವ ಧರ್ಮ. ಈ ನಿಟ್ಟಿನಲ್ಲಿ ಧಾರ್ಮಿಕ ಮುಖಂಡರು ಸಮಾಜದಲ್ಲಿ ಅರಿವು ಮೂಡಿಸಲು ಮುಂದಾಗಬೇಕಿದೆ ಎಂದರು.ನವದೆಹಲಿಯ ದೂರ ಶಿಕ್ಷಣ ಮಂಡಳಿ ಶೈಕ್ಷಣಿಕ ಸಲಹೆಗಾರ ಡಾ| ಚಂಬಿ ಪುರಾಣಿಕ ಮಾತನಾಡಿ, ಜಾತ್ಯಾತೀತತೆ ಹಾಗೂ ಸಮಾಜವಾದ ಭಾರತದ ಸಂವಿಧಾನದ ಪೀಠಿಕೆಯಲ್ಲಿ ಮೂಲಭೂತ ಅಂಶಗಳಾಗಿದ್ದು, ಇವುಗಳನ್ನು ಹೊರತುಪಡಿಸಿ ಯಾವ ಸರ್ಕಾರಗಳೂ ಕಾರ್ಯನಿರ್ವಹಿಸುವಂತಿಲ್ಲ ಎಂದರು.ಭಾರತದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಇರುವವರೆಗೆ ಡಾ| ಅಂಬೇಡ್ಕರರ ತತ್ವಾದರ್ಶಗಳು ಪ್ರಸ್ತುತವಾಗಿರುತ್ತವೆ ಎಂದರು. 'ವಿವಿ ಕುಲಪತಿ ಡಾ| ಎಚ್. ಮಹೇಶಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಪ್ರದಾಯಗಳೇ ಧರ್ಮ ಎಂಬ ಸೀಮಿತ ಪರಿಕಲ್ಪನೆಯಿಂದ ಬಳಲುತ್ತಿರುವ ಸಮಾಜದಲ್ಲಿ ಡಾ| ಅಂಬೇಡ್ಕರ ಮಹಾಕ್ರಾಂತಿಯ ಸಂಕೇತವಾಗಿ ದಲಿತರ ಪಾಲಿಗೆ ಆಶಾಕಿರಣವಾಗಿದ್ದಾರೆ ಎಂದರು.ಕುಲಸಚಿವರಾದ ಡಾ| ಕೆ.ಇ. ಪ್ರಕಾಶ್, ಡಾ| ಎಚ್.ಜಿ. ಶೇಖರಪ್ಪ, ವಿವಿ ಪ.ಜಾ.ಪ.ಪಂ ಘಟಕ ಸಂಯೋಜಕ ಡಾ| ಪಿ.ಪಿ. ರಾಥೋಡ, ಸ್ನಾತಕೋತ್ತರ ಅಧ್ಯಯನ ವಿಭಾಗ ಮುಖ್ಯಸ್ಥ ಡಾ| ಅನಂದ ಶಿವಾಪುರ ಇದ್ದರು. UV-5



ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕುಲಪತಿ ಡಾ| ಎಚ್. ಮಹೇಶಪ್ಪ ಡಾ| ಅಂಬೇಡ್ಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

— ! ಲೋಕದರ್ಶನ ! —
ಬುಧವಾರ, ಏಪ್ರಿಲ್ 15, 2015
ಪುಟ ಸಂಖ್ಯೆ - 02

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ ಬೆಳಗಾವಿ



ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸುತ್ತಿರುವ ಡಾ. ಎಚ್. ಮಹೇಶಪ್ಪ, ಶ್ರೀಗಳು, ಗಣ್ಯರು.

**ಬೆಳಗಾವಿ:** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 124ನೇ ಜನ್ಮ ದಿನಾಚರಣೆ ಹಾಗೂ ವಿಟಿಯು ಎಸ್‌ಸಿ, ಎಸ್‌ಟಿ ಘಟಕದ ಉದ್ಘಾಟನಾ ಸಮಾರಂಭ ನಡೆಯಿತು.

ಬೈಲೂರು ನಿಷ್ಕಲ ಮಂಟಪದ ಶ್ರೀ ನಿಜಗುಣಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಧರ್ಮ ಎನ್ನುವುದು ಮಾನವನ ಜೀವನದಲ್ಲಿ ಸಂಭ್ರಮಕ್ಕೆ ಕಾರಣವಾಗಬೇಕೇ ಹೊರತು, ಸಮಾಜದ ಸ್ವಾಸ್ಥ್ಯ ಹಾಳು ಮಾಡಬಾರದು. ಈ ಕುರಿತು ಧಾರ್ಮಿಕ ಮುಖಂಡರು ಜಾಗೃತಿ ಮೂಡಿಸಲು ಮುಂದೆ ಬರಬೇಕು ಎಂದರು.

ಶೈಕ್ಷಣಿಕ ಸಲಹೆಗಾರ ಡಾ.ಚಂಬಿ ಪುರಾಣಿಕ ಮಾತನಾಡಿ, ಜಾತ್ಯತೀತತೆ ಹಾಗೂ ಸಮಾಜವಾದ ಭಾರತೀಯ ಸಂವಿಧಾನದ ಮೂಲಭೂತ ಅಂಶಗಳಾಗಿದ್ದು, ಅವುಗಳನ್ನು ಧಿಕ್ಕರಿಸಿ ಯಾವ ಸರ್ಕಾರಗಳೂ ಕಾರ್ಯ ನಿರ್ವಹಿಸುವಂತಿಲ್ಲ ಎಂದು ತಿಳಿಸಿದರು.

ಕುಲಪತಿ ಡಾ.ಎಚ್.ಮಹೇಶಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಪ್ರದಾಯಗಳೇ ಧರ್ಮ ಎಂಬ ಸೀಮಿತ ಪರಿಕಲ್ಪನೆಯಿಂದ ಬಳಲುತ್ತಿರುವ ಸಮಾಜದಲ್ಲಿ ಡಾ.ಅಂಬೇಡ್ಕರರು ಮಹಾಕ್ರಾಂತಿಯ ಸಂಕೇತವಾಗಿ, ನೊಂದವರ ಪಾಲಿನ ಆಶಾಕಿರಣವಾಗಿ ಒದಗಿಬಂದರು ಎಂದರು.

ಕುಲಸಚಿವರಾದ ಡಾ.ಕೆ.ಇ.ಪ್ರಕಾಶ, ಡಾ.ಎಚ್.ಜಿ.ಶೇಖರಪ್ಪ, ಎಸ್ಸಿ-ಎಸ್ಟಿ ಘಟಕದ ಸಂಯೋಜಕ ಡಾ. ಪಿ.ಪಿ.ರಾಥೋಡ, ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ಆನಂದ ಶಿವಾಪುರ, ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು. VV-2

— ! ಹೊಸದಿಗಂತ ! —
ಬುಧವಾರ, ಏಪ್ರಿಲ್ 15, 2015
ಪುಟ ಸಂಖ್ಯೆ - 03

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ ಬೆಳಗಾವಿ

# ಧರ್ಮ ಸಮಾಜದಲ್ಲಿ ಅರಿವು ಮೂಡಿಸಲಿ: ನಿಜಗುಣಾನಂದ ಶ್ರೀ



ಬೆಳಗಾವಿ: ಧರ್ಮ ಎನ್ನುವುದು ಮಾನವನ ಜೀವನದಲ್ಲಿ ಸಂಭ್ರಮಾಚರಣೆ ಆಗಬೇಕೇ ಹೊರತು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಬಾರದು. ಸಮಾನತೆ ಸಾರುವುದೇ ನಿಜವಾದ ಮಾನವ ಧರ್ಮ. ಈ ನಿಟ್ಟಿನಲ್ಲಿ ಧಾರ್ಮಿಕ ಮುಖಂಡರು ಸಮಾಜದಲ್ಲಿ ಅರಿವು ಮೂಡಿಸಲು ಮುಂದೆ ಬರಬೇಕಾಗಿದೆ ಬೈಲೂರು ನಿಷ್ಕಲ ಮಂಟಪದ ಶ್ರೀ ನಿಜಗುಣಾನಂದ ಸ್ವಾಮೀಜಿ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರರವರ 124ನೇ ಜನ್ಮ ದಿನಾಚರಣೆ ಹಾಗೂ ವಿತಾವಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಯುವಕರು ಭೌತಿಕತೆ ಜಗತ್ತಿನಿಂದ ಹೊರಬಂದು ತಮ್ಮ ಜೀವನದ ಪ್ರತಿ ಹಂತದಲ್ಲಿಯೂ ಮಾನವ ಸಮಾಜದ ಸೇವೆಗೆ ಸನ್ನದ್ಧರಾಗಬೇಕೆಂದು ಸಲಹೆ ನೀಡಿದರು

ದೆಹಲಿಯ ದೂರ ಶಿಕ್ಷಣ ಮಂಡಳಿಯ ಮಾಜಿ ಸದಸ್ಯ ಡಾ. ಚಂಬಿ ಪುರಾಣಿಕ, ಜಾತ್ಯತೀತತೆ ಹಾಗೂ ಸಮಾಜವಾದ ಭಾರತದ ಸಂವಿಧಾನದ ಪೀಠಿಕೆಯಲ್ಲಿ ಮೂಲಭೂತ ಅಂಶಗಳಾಗಿದ್ದು, ಇವುಗಳನ್ನು ಹೊರತುಪಡಿಸಿ ಯಾವ ಸರ್ಕಾರಗಳು ಕಾರ್ಯನಿರ್ವಹಿಸುವಂತಿಲ್ಲ ಎಂದರು.

ಭಾರತದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಇರುವವರೆಗೆ ಡಾ. ಅಂಬೇಡ್ಕರರವರ ತತ್ವಾದರ್ಶಗಳು ಪ್ರಸ್ತುತವಾಗಿರುತ್ತವೆ. ಸಮಾಜದಲ್ಲಿರುವ ಸಾಮಾಜಿಕ ತಾರತಮ್ಯಗಳ ವಿರುದ್ಧ ಹೋರಡಲು ಅವರ ತತ್ವಗಳು ನಮ್ಮ ಯುವಕರಿಗೆ ದಾರಿದೀಪಗಳಾಗಿವೆ ಎಂದು ಅಭಿಪ್ರಾಯಪಟ್ಟರು. HD-3

ಕುಲಪತಿ ಡಾ. ಹೆಚ್. ಮಹೇಶಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಪ್ರದಾಯಗಳೇ ಧರ್ಮ ಎಂಬ ಸೀಮಿತ ಪರಿಕಲ್ಪನೆಯಿಂದ ಬಳಲುತ್ತಿರುವ ಸಮಾಜದಲ್ಲಿ ಡಾ. ಅಂಬೇಡ್ಕರ ಅವರು ಮಹಾಕ್ರಾಂತಿಯ ಸಂಕೇತವಾಗಿ, ಸಾವಿರಾರು ವರ್ಷಗಳಿಂದ ತುಳಿತಕ್ಕೊಳಗಾಗಿ, ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದ ದಲಿತ ಜನರ ಪಾಲಿಗೆ ಆಶಾಕಿರಣವಾಗಿದ್ದಾರೆ ಎಂದರು.

ಕುಲಸಚಿವರಾದ ಡಾ. ಕೆ. ಇ. ಪ್ರಕಾಶ್ ಮತ್ತು ಡಾ. ಹೆಚ್. ಜಿ. ಶೇಖರಪ್ಪ, ಪ.ಜಾ./ಪ.ಪ. ಘಟಕದ ಸಂಯೋಜಕ ಡಾ. ಪಿ. ಪಿ. ರಾಥೋಡ, ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ ಡಾ. ಆನಂದ ಶಿವಾಪೂರ ಇದ್ದರು.

— ! ಸಂಯುಕ್ತ ಕರ್ನಾಟಕ ! —
ಬುಧವಾರ, 15 ಏಪ್ರಿಲ್ 2015
ಪುಟ ಸಂಖ್ಯೆ-05

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ಸಮಾನತೆ ಸಾರುವದೇ ನಿಜವಾದ ಧರ್ಮ

ಬೆಳಗಾವಿ



'ಧರ್ಮ ಎನ್ನುವುದು ಮಾನವನ ಜೀವನದಲ್ಲಿ ಸಂಭ್ರಮಾಚರಣೆ ಆಗಬೇಕೇ ಹೊರತು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಬಾರದು. ಸಮಾನತೆ ಸಾರುವುದೇ ನಿಜವಾದ ಮಾನವ ಧರ್ಮ. ಈ ನಿಟ್ಟಿನಲ್ಲಿ ಧಾರ್ಮಿಕ ಮುಖಂಡರು ಸಮಾಜದಲ್ಲಿ ಅರಿವು ಮೂಡಿಸಲು ಮುಂದೆ ಬರಬೇಕಾಗಿದೆ' ಎಂದು ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಮಹಾಸ್ವಾಮಿಗಳು ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಡಾ. ಬಿ. ಆರ್. ಅಂಬೇಡ್ಕರರವರ 124ನೇ ಜನ್ಮ ದಿನಾಚರಣೆ ಹಾಗೂ ವಿತಾವಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉದ್ಘಾಟನಾ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.

ಯುವಕರು ಭೌತಿಕ ಜಗತ್ತಿನಿಂದ ಹೊರಬಂದು ತಮ್ಮ ಜೀವನದ ಪ್ರತಿ ಹಂತದಲ್ಲಿಯೂ ಮಾನವ ಸಮಾಜದ ಸೇವೆಗೆ ಸನ್ನದ್ಧರಾಗಬೇಕೆಂದು ಸಲಹೆ ನೀಡಿದರು. ಡಾ. ಚಂಬಿ ಪುರಾಣಿಕ ಮಾತನಾಡಿ 'ಜಾತ್ಯತೀತತೆ ಹಾಗೂ ಸಮಾಜವಾದ ಭಾರತದ ಸಂವಿಧಾನದ ಪೀಠಿಕೆಯಲ್ಲಿ ಮೂಲಭೂತ ಅಂಶಗಳಾಗಿದ್ದು, ಇವುಗಳನ್ನು ಹೊರತುಪಡಿಸಿ ಯಾವ ಸರ್ಕಾರಗಳು ಕಾರ್ಯನಿರ್ವಹಿಸುವಂತಿಲ್ಲ' ಎಂದರು.

ಅಧ್ಯಕ್ಷತೆ ವಹಿಸಿದ್ದ ವಿತಾವಿ ಕುಲಪತಿ ಡಾ. ಹೆಚ್. ಮಹೇಶಪ್ಪ ಮಾತನಾಡಿ, ಸಂಪ್ರದಾಯಗಳೇ ಧರ್ಮ ಎಂಬ ಸೀಮಿತ ಪರಿಕಲ್ಪನೆಯಿಂದ ಬಳಲುತ್ತಿರುವ ಸಮಾಜದಲ್ಲಿ ಡಾ. ಅಂಬೇಡ್ಕರ ಅವರು ಮಹಾಕ್ರಾಂತಿಯ ಸಂಕೇತವಾಗಿ ಸಾವಿರಾರು ವರ್ಷಗಳಿಂದ ತುಳಿತಕ್ಕೊಳಗಾಗಿ, ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದ ದಲಿತ ಜನರ ಪಾಲಿಗೆ ಆಶಾಕಿರಣವಾಗಿದ್ದಾರೆ.

ಕುಲಸಚಿವ ಡಾ. ಕೆ.ಇ. ಪ್ರಕಾಶ್, ಮೌಲ್ಯಮಾಪನ ಕುಲಸಚಿವ ಡಾ. ಹೆಚ್.ಜಿ. ಶೇಖರಪ್ಪ, ವಿತಾವಿವ.ಜಾ., ಪ.ಪ. ಘಟಕದ ಸಂಯೋಜಕ ಡಾ. ಪಿ. ಪಿ. ರಾಠೋಡ, ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಆನಂದ ಶಿವಾಪುರ ಮತ್ತಿತರರು ಭಾಗವಹಿಸಿದ್ದರು.

SK-5

— ! ಕನ್ನಡಮ್ಮ ! —
ಬುಧವಾರ, 15 ಏಪ್ರಿಲ್ 2015
ಪುಟ ಸಂಖ್ಯೆ-10

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
ಗ್ರಂಥಾಲಯ
ಬೆಳಗಾವಿ

# ಸಮಾನತೆ ಸಾರುವುದೆ ಮಾನವನ ನಿಜವಾದ ಧರ್ಮ: ಶ್ರೀಗಳು



ಬೆಳಗಾವಿ 14: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರರವರ 124ನೇ ಜನ್ಮ ದಿನಾಚರಣೆ ಹಾಗೂ ವಿತಾವಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಘಟಕದ ಉದ್ಘಾಟನಾ ಸಮಾರಂಭ ಮಂಗಳವಾರ ಜರುಗಿತು.

ನಿಜಗುಣಾನಂದ ಮಹಾಸ್ವಾಮಿಗಳು, ನಿಷ್ಕಲ ಮಂಟಪ, ಬೈಲೂರು ಇವರು ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ಧರ್ಮ ಎನ್ನುವುದು ಮಾನವನ ಜೀವನದಲ್ಲಿ ಸಂಭ್ರಮಾಚರಣೆ ಆಗಬೇಕೇ ಹೊರತು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಬಾರದು. ಸಮಾನತೆ ಸಾರುವುದೇ ನಿಜವಾದ ಮಾನವ ಧರ್ಮ. ಈ ನಿಟ್ಟಿನಲ್ಲಿ ಧಾರ್ಮಿಕ ಮುಖಂಡರು ಸಮಾಜದಲ್ಲಿ ಅರಿವು ಮೂಡಿಸಲು ಮುಂದೆ ಬರಬೇಕಾಗಿದೆ ಎಂದು ಹೇಳಿದರು.

ಯುವಕರು ಭೌತಿಕ ಜಗತ್ತಿನಿಂದ ಹೊರಬಂದು ತಮ್ಮ ಜೀವನದ ಪ್ರತಿ ಹಂತದಲ್ಲಿಯೂ ಮಾನವ ಸಮಾಜದ ಸೇವೆಗೆ ಸನ್ನದ್ಧರಾಗಬೇಕೆಂದು ಸಲಹೆ ನೀಡಿದರು ಡಾ. ಚಂಬಿ ಪುರಾಣಿಕ, ಶೈಕ್ಷಣಿಕ ಸಲಹೆಗಾರರು, ಜೆಮ್ಸ್ ಬಿ-ಸ್ಕೂಲ್ ಹಾಗೂ ಮಾಜಿ ಸದಸ್ಯರು, ದೂರ ಶಿಕ್ಷಣ ಮಂಡಳಿ, ನವದೆಹಲಿ ಇವರು ಮುಖ್ಯ ಅತಿಥಿಗಳಾಗಿ ಮಾತನಾಡಿ ಜಾತ್ಯಾತೀತತೆ ಹಾಗೂ ಸಮಾಜವಾದ ಭಾರತದ ಸಂವಿಧಾನದ ಪೀಠಿಕೆಯಲ್ಲಿ ಮೂಲಭೂತ ಅಂಶಗಳಾಗಿದ್ದು, ಇವುಗಳನ್ನು ಹೊರತುಪಡಿಸಿ ಯಾವ ಸರ್ಕಾರಗಳು ಕಾರ್ಯನಿರ್ವಹಿಸುವಂತಿಲ್ಲ ಎಂದು ಹೇಳಿದರು. K-10

ಭಾರತದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಇರುವವರೆಗೆ ಡಾ. ಅಂಬೇಡ್ಕರರವರ ತತ್ವಾದರ್ಶಗಳು ಪ್ರಸ್ತುತವಾಗಿರುತ್ತವೆ. ಸಮಾಜದಲ್ಲಿರುವ ಸಾಮಾಜಿಕ ತರತಮ್ಯಗಳ ವಿರುದ್ಧ ಹೋರಾಡಲು ಅವರ ತತ್ವಗಳು ನಮ್ಮ ಯುವಕರಿಗೆ ದಾರಿದೀಪಗಳಾಗಿವೆ ಎಂದು ಅಭಿಪ್ರಾಯಪಟ್ಟರು. ವಿತಾವಿ ಕುಲಪತಿಗಳಾದ ಡಾ. ಹೆಚ್. ಮಹೇಶಪ್ಪ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಸಂಪ್ರದಾಯಗಳೇ ಧರ್ಮ ಎಂಬ ಸೀಮಿತ ಪರಿಕಲ್ಪನೆಯಿಂದ ಬಳಲುತ್ತಿರುವ ಸಮಾಜದಲ್ಲಿ ಡಾ. ಅಂಬೇಡ್ಕರ ಅವರು ಮಹಾಕ್ರಾಂತಿಯ ಸಂಕೇತವಾಗಿ, ಸಾವಿರಾರು ವರ್ಷಗಳಿಂದ ತುಳಿತಕ್ಕೊಳಗಾಗಿ, ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದ ದಲಿತ ಜನರ ಪಾಲಿಗೆ ಆಶಾಕಿರಣವಾಗಿದ್ದಾರೆ.

ಕುಲಸಚಿವರಾದ ಡಾ. ಕೆ. ಇ. ಪ್ರಕಾಶ್, ಮೌಲ್ಯಮಾಪನ ಕುಲಸಚಿವರಾದ ಡಾ. ಹೆಚ್. ಜಿ. ಶೇಖರಪ್ಪ, ವಿತಾವಿಪ.ಜಾ., ಪ.ಪ. ಘಟಕದ ಸಂಯೋಜಕರಾದ ಡಾ. ಪಿ. ಪಿ. ರಾಠೋಡ, ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಆನಂದ ಶಿವಾಪುರ ಹಾಗೂ ಪ್ರಾಧ್ಯಾಪಕರು, ಸಿಬ್ಬಂದಿ ವರ್ಗ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.